

# ಪುನೀತ್ ಜೊತೆ ನಟಿಸುವಾಸೆ

ದೀಪಾ ಹಿರೇಮಠ
ಉದಯ 'ಬ್ರಹ್ಮಾಸ್ತ್ರ'ದ ಶಿವರಂಜಿನಿ

★ *ನಟನೆಗೆ ಪ್ರೇರಣೆ ಪಡೆದಿದ್ದು ಹೇಗೆ?*

ಚಿಕ್ಕವಯಸ್ಸಿನಿಂದಲೂ ಟಿವಿ, ಸಿನಿಮಾ ನೋಡುತ್ತಿದ್ದೆ. ನನಗೆ ಪುನೀತ್ ರಾಜ್‌ಕುಮಾರ್ ಇಷ್ಟದ ನಟ. ಇದ್ದಕ್ಕಿದ್ದಂತೆ ನಾನು ಅವರ ಜೊತೆ ನಟಿಸಬೇಕು ಎನ್ನುವ ಆಶೆ ಮೂಡಿತು. ಅದು ನನ್ನಲ್ಲಿ ನಟಿಯಾಗಬೇಕು ಎನ್ನುವ ಅಭಿಲಾಷೆಯನ್ನು ಅಪಾರವಾಗಿ ಮೂಡಿಸಿತು. ಅದು ನನ್ನನ್ನು ಆಡಿಷನ್‌ಗಳಿಗೆ ಮೇಲಿಂದ ಮೇಲೆ ಹೋಗುವಂತೆ ಪ್ರೇರೇಪಿಸಿತು. ಮೂಲತಃ ನನಗೆ ನಟನೆಯ ಮೂಲತತ್ವಗಳು ಗೊತ್ತಿರಲಿಲ್ಲ. ಮೊದಲ ಬಾರಿಗೆ 'ಮಹಾಸತಿ'ಗೆ ಬಣ್ಣ ಹಚ್ಚಿದೆ. ಅಲ್ಲಿ ನಿರ್ದೇಶಕ ಸುನಿಲ್ ಪುರಾಣಿಕ್ ಅವರು ಕಲಿಸಿದರು. ನಟಿಯಾದ ಮೇಲೆ ನಟನೆಯನ್ನು ಕಲಿಯಲು ಆರಂಭಿಸಿದೆ. ಆಮೇಲೆ ಒಂದು ಸಿನಿಮಾದಲ್ಲಿ ಅವಕಾಶ ಸಿಕ್ಕಿತು. ಮತ್ತೆ 'ವಾರೆಜಾರಾ'. ಆರಂಭದಲ್ಲಿ ನಮ್ಮ ಮನೆಯಲ್ಲಿಯೇ ಇದಕ್ಕೆ ವಿರೋಧ ಇತ್ತು. ಬೈಲಹೊಂಗಲದಲ್ಲಿ ಚಿತ್ರೀಕರಣ ನಡೆಯುತ್ತಿದ್ದ ಕಾರಣ ಹೇಗೂ ಹತ್ತಿರದಲ್ಲಿಯೇ ಇರುತ್ತಾಳೆ ಎಂದು ನಟನೆಗೆ ಒಪ್ಪಿದರು. ಈಗ ಮನೆಯಲ್ಲಿ ಎಲ್ಲರೂ ನನ್ನನ್ನು ಹುರಿದುಂಬಿಸುತ್ತಿದ್ದಾರೆ.

★ *ಬೇರೆ ಇನ್ನೇನು ಮಾಡುತ್ತಿದ್ದೀರಿ?*

ಗದಗ ಜಿಲ್ಲೆ ಹುಲುಕೋಟೆ ನಮ್ಮದು. ಅಲ್ಲೇ ನಾನು ಐದು ವರ್ಷದ ಕಾನೂನು ಪದವಿಯ ನಾಲ್ಕನೆ ಸೆಮ್‌ನಲ್ಲಿ ಓದುತ್ತಿದ್ದೇನೆ. ತಂದೆ ಜಗದೀಶ್ ಹಿರೇಮಠ, ಅಮ್ಮ ನಿರ್ಮಲ ಹಿರೇಮಠ. ಬೆಂಗಳೂರಿನಲ್ಲಿ ನಮ್ಮ ಚಿಕ್ಕಮ್ಮನ ಮನೆಯಲ್ಲಿ ಇದ್ದೇನೆ. ಬಿಡುವು ಇದ್ದಾಗ ಕಾಲೇಜಿಗೆ ಹೋಗುತ್ತಿದ್ದೇನೆ. ಓದುವುದನ್ನು ಬಿಡಬಾರದು, ಒಂದು ಪದವಿಯನ್ನು ಪಡೆಯಬೇಕು ಎಂದು ಭಾವಿಸಿದ್ದೇನೆ. ವೃತ್ತಿಯಾಗಿ ನಟನೆಯನ್ನೇ ತೆಗೆದುಕೊಳ್ಳಬೇಕು ಎಂದು ತೀರ್ಮಾನಿಸಿದ್ದೇನೆ. ಅದಕ್ಕೇ ಹೆಚ್ಚು ಒತ್ತು ಕೊಡುತ್ತಿದ್ದೇನೆ.

★ *ಮೊದಲ ದಿನ ಕ್ಯಾಮೆರಾ ಎದುರು ನಿಂತಾಗ ಹೇಗೆನಿಸಿತು?*

ನಾನಲ್ಲದ ನಾನಾಗಿ ನಿಂತಿದ್ದೆ. ಮನಸ್ಸಿನ ತುಂಬಾ ಭಯ ಆವರಿಸಿತ್ತು. ಮಾಡುತ್ತೇನೆ ಎಂಬ ಆತ್ಮವಿಶ್ವಾಸ ಆಗ ನನಗಿರಲ್ಲ. ನಿರ್ದೇಶಕರು 'ನೀನು ಮಾಡುತ್ತೀಯಾ ಫ್ರೀಯಾಗಿರು' ಎಂಬ ವಿಶ್ವಾಸವನ್ನು ತುಂಬಿದರು.

★ *ಶಿವರಂಜಿನಿಯಾಗಿ ಹೇಗಿದ್ದೀರಿ?*

ಆಂಧ್ರಪ್ರದೇಶ– ತೆಲಂಗಾಣ ರಾಜ್ಯಗಳಲ್ಲಿ ಸುತ್ತಾಡುತ್ತಿದ್ದೇನೆ. ನಾನು ಕಡಪ ಜಿಲ್ಲೆಯಲ್ಲಿ ಹುಟ್ಟಿ ಬೆಳೆದವಳು. ನನಗೆ ಕನ್ನಡ ಬರುವುದಿಲ್ಲ. ಬೆಂಗಳೂರಿಗೆ ಬಂದ ನಂತರ ಕನ್ನಡ ಕಲಿತು ತೆಲುಗು ಮಿಶ್ರಿತ ಕನ್ನಡ ಮಾತಾಡುತ್ತಿದ್ದೇನೆ. 'ಬ್ರಹ್ಮಾಸ್ತ್ರ' ಎನ್ನುವುದು ವಿನಾಶದ ಕಾಣಕ್ಕೆ ಬಳಕೆ ಆಗುವ ಆಯುಧ. ಇಲ್ಲಿ ದ್ವೇಷವನ್ನು ಮೀರುವ ಪ್ರೀತಿಯನ್ನು ಹರಿಸಲು ಬಳಕೆಯಾಗುತ್ತದೆ. ಬೇರೆ ಕಥೆಗಳಂತೆ ಅತ್ತೆ– ಸೊಸೆಯಂದಿರ ಕದನವಾಗಲಿ, ಹಗೆ ಸಾಧನೆಯ ತಂತ್ರಗಳಾಗಲಿ ಇಲ್ಲಿಲ್ಲ. ಸ್ನೇಹಮಯ ವಾತಾವರಣ ಕುಟುಂಬದಲ್ಲಿಯೂ ಇರಲಿ ಎನ್ನುವ ಆಶಯ ಇದೆ. ಹುಡುಗನ ಮನೆಯಲ್ಲಿ ಹಾಗೆಯೇ ಇದೆ. ಪ್ರೀತಿಗೆ ತುಂಬಾ ಪ್ರಾಮುಖ್ಯತೆ ಇದೆ. ನಮ್ಮ ಮನೆಯಲ್ಲಿ ಸಂಪ್ರದಾಯ ಇದೆ. ಪ್ರೀತಿಗಿಂತ ಪರಂಪರೆ ಮುಖ್ಯ ಎನ್ನುವ ಜಿಜ್ಞಾಸೆಯೇ ಕಥೆಯ ಹಂದರ.

★ *ಅಚ್ಚ ಕನ್ನಡದ ಹುಡುಗಿಯಾದ ನಿಮಗೆ ಎದುರಾದ ಸವಾಲುಗಳೇನು?*

ತೆಲುಗು ಗೊತ್ತೇ ಇಲ್ಲದ ನಾನು, ಕನ್ನಡ ಗೊತ್ತಿಲ್ಲದಂತೆ ನಟಿಸಬೇಕು. ಸಂಪೂರ್ಣ ತೆಲುಗು ಮೂಲದವಳಾಗಿ ಕಾಣಿಸಿಕೊಳ್ಳಬೇಕು ಇದು ದೊಡ್ಡ ಸವಾಲಾಗಿತ್ತು. ಚಿತ್ರೀಕರಣವೂ ಹೈದರಾಬಾದ್, ಕಡಪ, ರಾಯಲ್‌ಸೀಮೆಯಲ್ಲಿ ನಡೆಯುತ್ತಿದೆ. ಪ್ರಾದೇಶಿಕ ಭಿನ್ನತೆಯನ್ನು ಹೊಂದಾಣಿಕೆ ಮಾಡಿಕೊಂಡು ಸ್ಥಳೀಯಳಾಗುವುದು ಆರಂಭದಲ್ಲಿ ಕಷ್ಟ ಆಯಿತು. ಇದರಿಂದ ಸ್ವಲ್ಪ ಮಟ್ಟಿಗೆ ತೆಲುಗು ಕಲಿಯಲು ಸಾಧ್ಯವಾಯಿತು ಎನ್ನುವ ಖುಷಿಯೂ ಇದರಿಂದ ಸಿಕ್ಕಿತು.

★ *ಮುಂದಿನ ಹೆಜ್ಜೆಗಳು ಹೇಗಿರಬೇಕು ಅಂತ ಅಂದುಕೊಂಡಿದ್ದೀರಿ?*

ಪುನೀತ್ ಜೊತೆ ಒಮ್ಮೆಯಾದರೂ ನಟಿಸಬೇಕು ಎನ್ನುವುದು ನನ್ನ ಕನಸು. ಪೂರ್ಣಾವಧಿ ನಟಿಯಾಗಿಯೇ ಉಳಿಯುತ್ತೇನೆ. ಒಳ್ಳೆಯ ಬ್ಯಾನರ್‌ನ ಒಳ್ಳೆಯ ಕಥೆಗೆ ನಾಯಕಿ ಆಗಬೇಕು ಅಂದುಕೊಂಡಿದ್ದೇನೆ.

■ ರಾಘವೇಂದ್ರ